**02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**

**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಸಿಸಿ ನಂ. 1944/2024**

| | |
|---|---|
| ಹೆಸರುಃ  ರಂಗಪ್ಪ ಕೆ ಎಸ್ | ಚಾಸಾಃ 2 |
| ತಂದೆಯ  ಹೆಸರುಃ  ಸಿದ್ದಲಿಂಗಪ್ಪ ಕೆ | ಪ್ರಾಸಾ: 2 |
| ವಯಸ್ಸುಃ   53  ವರ್ಷ | |
| ಉದ್ಯೋಗಃ  ವ್ಯವಸಾಯ | |
| ವಾಸ ಸ್ಥಳಃ ಕುಳೇನೂರು ಗ್ರಾಮ, ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 26-03-2025  ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಚಾಸಾ-1 ಮತ್ತು 3 ಯಾರು ಎಂದು ನನಗೆ ಗೊತ್ತಿಲ್ಲ. ಅರೋಪಿತರು ಶಿವಕುಳೇನೂರು ಗ್ರಾಮದವರು. ನಾನು ಈ ಪ್ರಕರಣದಲ್ಲಿ ಏನನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ನಾನು ಯಾವುದೇ ಜಗಳ ಬಿಡಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ22-02-2024ರಂದು ಮದ್ಯಾಹ್ನ 3.30ರ ಸಮಯದಲ್ಲಿ ನಾನು ವತ್ತು ಚಾಸಾ-3 ರವರು ಚಾಸಾ-1 ರವರ ಮನೆ ಮುಂದಿನ ಕಟ್ಟೆಯ ಮೇಲೆ ಕುಳಿತದ್ದಾಗ ಚಾಸಾ-1 ರವರು ತಮ್ಮ ಬಾಗಿಲ ಮುಂದೆ ನಿಂತುಕೊಂಡು ನಮ್ಮೊಂದಿಗೆ ಮಾತನಾಡುತ್ತಿದ್ದು ಸದರಿ ಸಮಯಕ್ಕೆ

ಆರೋಪಿತರು ಜಮೀನನ್ನು ಭಾಗಮಾಡಿಕೊಳ್ಳದಂತೆ ಮಾಡಲು ವಂಶವೃಕ್ಷವನ್ನು ರದ್ದುಪಡಿಸಲು ತಮ್ಮ ಮಾವನಾದ ಚಂದ್ರಪ್ಪನಿಗೆ ಆಧಾರ್ ಕಾರ್ಡ್ ನೀಡದಂತೆ ಚಾಡಿ ಹೇಳುತ್ತೀಯ ಎಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು , ಕೈಕಾಲುಗಳಿಂದ ಮೈ ಕೈ ಗೆ ಹೊಡೆದು ಜೀವಬೆದರಿಕೆ ಹಾಕಿದರು ಎಂದರೆ ನನಗೆ ಗೊತ್ತಿಲ್ಲ, ಸದರಿ ಜಗಳವನ್ನು ನಾನು ಮತ್ತು ಚಾಸಾ-3 ರವರು ಸೇರಿ ಬಿಡಿಸಿದೆವು ಎಂದರೆ ನನಗೆ ಗೊತ್ತಿಲ್ಲ.

ಸದರಿ ವಿಚಾರದ ಕುರಿತು ನಾನು 24-02-2024ರಂದು ---------------ರಂತೆಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಪರಿಚಿತರಾದಕಾರಣ ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ವೈ ಎಂ ಅರ್ ವಕೀಲರಿಂದಃ ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**

**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಸಿಸಿ ನಂ. 1944/2024**

| | |
|---|---|
| ಹೆಸರುಃ ಜಯಪ್ಪ | ಚಾಸಾಃ 1 |
| ತಂದೆಯ ಹೆಸರುಃ ಹನುಮಂತಪ್ಪ | ಪ್ರಾಸಾ: 1 |
| ವಯಸ್ಸುಃ 66 ವರ್ಷ | |
| ಉದ್ಯೋಗಃ ವ್ಯವಸಾಯ | |
| ವಾಸ ಸ್ಥಳಃ ಶಿವಕುಳೇನೂರು ಗ್ರಾಮ, ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 21-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಅರೋಪಿತರು ನನ್ನ ಸಂಬಂಧಿಕರು.

ನಾನು ಫೆಬ್ರವರಿ ಮಾಹೆಯ 2024ರಲ್ಲಿ ಶಿವಮೊಗ್ಗದ ಆಸ್ಪತ್ರೆಯಿಂದ ಮನೆಗೆ ಬಂದಿದ್ದು ಆರೋಪಿತರು ಸುಳ್ಳು ಮಾಹಿತಿಯನ್ನು ನೀಡಿ ವಂಶವೃಕ್ಷವನ್ನು ಪಡೆದಿರುವ ಸಂಗತಿ ತಿಳಿದುಬಂದಿರುತ್ತದೆ. ಸದರಿ ವಿಚಾರವಾಗಿ ನಾನು ಭದ್ರಾವತಿಯಲ್ಲಿರುವ ಅಸಲಿ ವಂಶದ ವಾರಸುದಾರರಿಗೆ ಮಾಹಿತಿಯನ್ನು ನೀಡಿದ ಕಾರಣ ಸದರಿ ವೈಷಮ್ಯದಿಂದ ಆರೋಪಿತರು ನಾನು ಮನೆಯಲ್ಲಿ ಒಬ್ಬನೇ ಇರುವ ಸಮಯವನ್ನು ನೋಡಿ ನಮ್ಮ ಮನೆಗೆ ನುಗ್ಗಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. 3ನೇ ಆರೋಪಿ ತನ್ನ ಕೈಯಿಂದ ನನ್ನ ಬಲಭಾಗದ ಕಿವಿಗೆ ಹೊಡೆದಿದ್ದು, ಕೈ ಕಾಲುಗಳಿಂದ ನನ್ನ ಮೈ ಕೈ ಗೆ ಹೊಡೆದಿರುತ್ತಾರೆ. ನಾನು ಸದರಿ ದಿನದಂದು ಮನೆಯಲ್ಲಿ ಯಾರು ಇರದ ಕಾರಣ ಆಸ್ಪತ್ರೆಗೆ ಮತ್ತು ಠಾಣೆಗೆ ಹೋಗಿರುವುದಿಲ್ಲ, ಮಾರನೇ ದಿನ ಆಸ್ಪತ್ರೆ ಗೆ ಹೋಗಿ ಚಿಕಿತ್ಸೆ ಪಡೆದು ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸದರಿ ಗಲಾಟೆ ಮದ್ಯಾಹ್ನ 3.00 ರಿಂದ 5.30 ವರೆಗೆ ನಡೆದಿರುತ್ತದೆ.

ಸಾಕ್ಷಿ ಕಡತದಲ್ಲಿನ ದೂರನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ದಾಖಲಿಸಿದ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಮಾರನೇ ದಿನ ಮಹಜರಿಗಾಗಿ ನಮ್ಮ ಮನೆಯ ಬಳಿ ಬಂದು ಸ್ಥಳ ಪಂಚನಾಮೆ ಜರುಗಿಸಿದ್ದು, ಸದರಿ ಸಮಯಕ್ಕೆ ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಸಮಯಕ್ಕೆ ನಮ್ಮ ಅಕ್ಕಪಕ್ಕದ ಮನೆಯವರು ಹಾಜರಿದ್ದರು. ಸಾಕ್ಷಿ ಕಡತದಲ್ಲಿನ ಕೃತ್ಯ ನಡೆದ ಸ್ಥಳದ ಪಂಚನಾಮೆಯನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00ರ ವರೆಗೆ ಜರುಗಿಸಿರುತ್ತಾರೆ.

ಈಗ ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೆನೆ. ಸದರಿ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ನಿಪಿ-3 ನ್ನು ನಿಪಿ-2 ರ ಸಮಯಕ್ಕೆ ತೆಗೆಯಲಾಯಿತು. ನಾನು ಸದರಿ ವಿಚಾರಗಳ ಕುರಿತು ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಆದರೆ ಪೊಲೀಸರಿಗೆ ತಿಳಿಸಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ದೂರು , ಮಹಜರು ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು , ಮಹಜರು ಮತ್ತು ಮುಂದುವರೆದ ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ದೂರು , ಮಹಜರು ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ22-02-ದಿಃ 2024ರಂದು ಮದ್ಯಾಹ್ನ 3.30ರ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಆರೋಪಿತರು ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿ ನನ್ನನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈಯ್ದರು ಎಂದರೆ ಸರಿ. ಸದರಿ ಆರೋಪಿತರು ಭದ್ರಾವತಿ ವಾಸಿಯಾದ

ನಮ್ಮ ಮಾವ ಚಂದ್ರಪ್ಪನಿಗೆ ಇಲ್ಲಸಲ್ಲದ್ದನ್ನು ಹೇಳಿ ತಾವು ಮಾಡಿಸಿಕೊಂಡಿದ್ದ ವಂಶವೃಕ್ಷವನ್ನು ರದ್ದುಗೊಳಿಸಲು ಸಹಾಯ ಮಾಡಿದ್ದೀಯ ಎಂದು ನನ್ನನ್ನು ಪ್ರಶ್ನಿಸಿ ನಮ್ಮ ಮನೆಯ ಬಾಗಿಲನ್ನು ಮುಚ್ಚಿ ಎಲ್ಲಾ ಆರೋಪಿತರು ಸೇರಿ ಕೈ ಕಾಲುಗಳಿಂದ ನನ್ನ ಮೈ ಕೈ ಗೆ ಹೊಡೆದರು ಎಂದರೆ ಸರಿ. ಸದರಿ ಸಮಯಕ್ಕೆ ಪರಶುರಾವ ಮತ್ತು ನವೀನ ಎನ್ನುವವರು ಉಳಿದ ಆರೋಪಿತರಿಗೆ ಹೊಡೆಯಿರಿ ಬೈಯ್ಯಿರಿ ಎಂದು ಪ್ರಚೋದಿಸಿದರು ಎಂದರೆ ಸರಿ. ನಂತರ ಎಲ್ಲಾ ಆರೋಪಿತರು ನಿನ್ನನ್ನು ಇಷ್ಟಕ್ಕೆಬಿಡುವುದಿಲ್ಲ ಸಾಯಿಸಿಬಿಡುತ್ತೇವೆ ಎಂದು ಜೀವಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಸದರಿ ಎಲ್ಲಾ ವಿಚಾರಗಳ ಕುರಿತು ನಾನು ದಿಃ 23-02-2024ರಂದು ದೂರನ್ನು ದಾಖಲಿಸಿದ್ದೆನೆ ಎಂದರೆ ಸರಿ. ನಾನು ನೀಡಿದ ದೂರಿ ಹಿನ್ನೆಲೆಯಲ್ಲಿ ದಿಃ 2-02-2024ರಂದು ಚಾಸಾ-9 ರವರು ಚಾಸಾ-5 ಮತ್ತು 6 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಮಹಜರು ಕ್ರಮವನ್ನು ಬೆಳಿಗ್ಗೆ 9.00 ರಿಂದ 9.45ರವರೆಗೆ ಜರುಸಿದರು ಎಂದರೆ ಸರಿ. ಸದರಿ ವಿಚಾರವಾಗಿ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಎಲ್ಲಾ ವಿಚಾರಗಳ ಕುರಿತು ನಾನು ಮುಂದುವರೆದ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನನ್ನ ಮುಂದುವರೆದ ಮರು ಹೇಳಿಕೆಯಲ್ಲಿ ಗಲಾಟೆ ಸಮಯದಲ್ಲಿ ನಾನು ನಮ್ಮ ಮನೆಯ ಮುಂಭಾಗದ ಬಾಗಿಲಿನಲ್ಲಿ ನಿಂತಿದ್ದು 1 ರಿಂದ 3 ನೇ ಆರೋಪಿತರು ಸೇರಿ ನನಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಕೈ ಕಾಲುಗಳಿಂದ ಹೊಡೆದು ಹಲ್ಲೆ ಮಡಿರುತ್ತಾರೆ ಎಂದು ನಮೂದಿಸಿದ್ದೆನೆ ಎಂದರೆ ಸರಿ. ಗಲಾಟೆ ಸಮಯದಲ್ಲಿನಮ್ಮ ಮನೆಯ ಮುಂದೆ ಸೇರಿದ ನಂದನಕುಮಾರ, ಪರಶುರಾಮ, ನವೀನ ಇವರೂ ಸಹ ಇದ್ದರು ಎಂದು ತಿಳಿದುಕೊಂಡೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಗಳದ ಸಮಯದಲ್ಲಿ ನಂದನಕುಮಾರ ಎನ್ನುವವರು ಸದರಿ ದಿನದಂದು ಕಾಲೇಜಿಗೆ ಹೋಗಿರುತ್ತಾರೆ ಎಂದು ಮರುಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಸಮಯದಲ್ಲಿ ಪರಶುರಾಮ, ನವೀನ ಎನ್ನುವರು ಜಗಳದಲ್ಲಿ ಇರುವುದಿಲ್ಲ ಎಂದು ನಾನು ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ವೈ ಎಂ ಅರ್ ವಕೀಲರಿಂದ.**

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1ರ ಬರವಣಿಗೆ ನನ್ನದಲ್ಲ ಎಂದರೆ ಸರಿ. ಸದರಿ ನಿಪಿ1 ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-1ರ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ-1 ನ್ನು ಸ್ಟಾಂಪ್ ವೆಂಡರ್ ರವರು ಬರೆದಿದ್ದು ಅವರ ವಿವರ ನನಗೆ ಗೊತ್ತಿಲ್ಲ.  ನಿಪಿ-1 ನ್ನು ನನ್ನ ಹೇಳಿಕೆಯಂತೆ ನಾನೇ ಖುದ್ದು ಹಾಜರಿದ್ದು ಬರೆಸಿರುತ್ತೇನೆ. ನಿಪಿ-1ರ ದಿನಾಂಕ 22-02-2024 ಆಗಿದೆ. ನಾನು ಮತ್ತು ಆರೋಪಿತರು ಒಂದೇ ಊರಿನವರಾಗಿದ್ದು ಬೇರೆ ಬೇರೆ ಕೇರಿಯವರಾಗಿದ್ದೇವೆ. ಹಾಗಾಗಿ ನನ್ನ ಹಾಗೂ ಆರೋಪಿತರ ನಡುವೆ ಯಾವುದೇ ವೈಷಮ್ಯ ಇಲ್ಲ ಎಂದರೆ ಸಾಕ್ಷಿ ನಾನು ಖರೀದಿ ಮಾಡಿದ ನಿವೇಶನದ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ವೈಷಮ್ಯವಿದ್ದು ಸದರಿ ವಿಚಾರವಾಗಿ ನಾನು 1 ಮತ್ತು 2 ನೇ ಆರೋಪಿತರ ವಿರುದ್ದ ದಾವೆಯನ್ನು ಹಾಕಿರುತ್ತೇನೆ.

ನಮ್ಮ ಮತ್ತು ಆರೋಪಿತರ ನಡುವೆ ವೈಷಮ್ಯಕ್ಕೆ ಕಾರಣವಾದ ವಂಶವೃಕ್ಷ ಪಡೆದ ದಿನಾಂಕ ಈ ಪ್ರಕರಣದ ದೂರನ್ನು ದಾಖಲಿಸುವ 2 ತಿಂಗಳ ಮುನ್ನ ಆಗಿರುತ್ತದೆ. ಸದರಿ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಇದುವರೆಗೂ ವೈಷಮ್ಯ ಮುಂದುವರೆಯುತ್ತಿದೆ ಎಂದರೆ ಸರಿ. ಆದ ಕಾರಣ ನಾನು ಈ ದೂರನ್ನು ಆರೋಪಿತರ ವಿರುದ್ದ ದಾಖಲಿಸಿದ್ದೆನೆ ಎಂದರೆ ಸರಿ.  ಚಾಸಾ-5ಮತ್ತು 6 ರವರನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ಸಹಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ಸಹಿ ಮಾಡಿಲು ಚಾಸಾ-5 ಮತ್ತು 6 ರವರನ್ನು ಪೊಲೀಸರೇ ಕರೆದಿರುತ್ತಾರೆ.  ನಿಪಿ-2ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ,  ನಿಪಿ-3 ನ್ನು ಪೊಲೀಸರು ತಮ್ಮ ಮೊಬೈಲ್ ನಲ್ಲಿ ಬೆಳಿಗ್ಗೆ 11.30 ಸಮಯಕ್ಕೆ ತೆಗೆದಿರುತ್ತಾರೆ. ನಾನು ನಿಪಿ-2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಪೊಲೀಸ್ ಠಾಣೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದೂರನ್ನು ದಾಖಲಿಸಲು ಮಾತ್ರ ಹೋಗಿದ್ದೆ ಎಂದು ನುಡಿಯುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ಪೊಲೀಸರು ಬಂದ ದಿನಾಂಕ ನನಗೆ ನೆನಪಿಲ್ಲ. ಸದರಿ ಸಮಯಕ್ಕೆ ಯಾವ ಪೊಲೀಸರು ಬಂದಿದ್ದರು ಎಂದು ಸಹ ನನಗೆ ಹೇಳಲಾಗುವುದಿಲ್ಲ.

ನನ್ನ ಹಾಗೂ ಆರೋಪಿತರ ನಡುವೆ ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಿಸಿದ ನಿಪಿ-1 ರಲ್ಲಿ ನಮ್ಮ ಮನೆಯ ವಿವರವನ್ನು ನಮೂದಿಸಿಲ್ಲಎಂದರೆ ಸರಿ. ಹಾಗಾಗಿ ಸದರಿ ಮನೆ ನಮಗೆ ಸೇರಿದೆ ಎಂಬ ಬಗ್ಗೆ ತನಿಖಾ ಹಂತದಲ್ಲಿ ಪೊಲೀಸರಿಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿ. ಹಾಗಾಗಿ ನನ್ನ ಹಾಗೂ ಆರೋಪಿತರ ನಡುವೆ ಖಾಲಿ ನಿವೇಶನ ಮತ್ತು ವಂಶವೃಕ್ಷದ ಕುರಿತು ವೈಷಮ್ಯವಿರುವ ಕಾರಣ ನಾನು ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಬೈಯ್ದಿಲ್ಲ, ಹೊಡೆದಿಲ್ಲದೆ ಇದ್ದರು ಸಹ ಈ ದಿನ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಗಲಾಟೆ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಹೋಗಿಲ್ಲ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಗೆ ಮೊದಲಿನಿಂದಲೂ ಇದ್ದಂತಹ ಕಾಯಿಲೆಗೆ ಚಿಕಿತ್ಸೆಗೆ ಪಡೆಯಲು ದಿಃ 25-02-2024ರಂದು ಹೋಗಿದ್ದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**